# ಮಾನ್ಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ

ರಾಮನಗರ

ಅಸಲು ದಾವಾ ಸಂಖ್ಯೆ: 115/2023

ವಾದಿ : ಶ್ರೀ ಚಂದ್ರಶೇಖರಯ್ಯ

ವಿರುದ್ಧ

ಪ್ರತಿವಾದಿಗಳ : ಶ್ರೀ ರೇಣುಕಾರಾಧ್ಯ ಮತ್ತು ಇತರರು

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿ ರಾಮನಗರ.

PW1 04/7

-:ವಾದಿಯು ಸಲ್ಲಿಸುತ್ತಿರುವ ಮುಖ್ಯ ವಿಚಾರಣಾ ಪ್ರಮಾಣ ಪತ್ರ:-

ಹೆಸರು : ಶ್ರೀ ಚಂದ್ರಶೇಖರಯ್ಯ,

ತಂದೆಯ ಹೆಸರು : ಲೇಟ್ ಚನ್ನಬಸವಯ್ಯ,
ವಯಸ್ಸು : 77 ವರ್ಷ,
ವಿಳಾಸ : ಚನ್ನಪುರದದೊಡ್ಡಿ ಗ್ರಾಮ,
ಕಸಬಾ ಹೋಬಳಿ,
ರಾಮನಗರ ತಾಲ್ಲೂಕು,
ಬೆಂಗಳೂರು ದಕ್ಷಿಣ ಜಿಲ್ಲೆ,

Copy Received D1 to D3 Paylm. A

ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ ತಾಲ್ಲೂಕು, ಕಸಬಾ ಹೋಬಳಿ, ಚನ್ನಪುರದದೊಡ್ಡಿ ಗ್ರಾಮದಲ್ಲಿ ವಾಸವಾಗಿರುವ ಲೇಟ್ ಚನ್ನಬಸವಯ್ಯ ರವರ ಮಗನಾದ ಸುಮಾರು 77 ವರ್ಷ ವಯಸ್ಸುಳ್ಳ ಶ್ರೀ ಚಂದ್ರಶೇಖರಯ್ಯ ಆದ ನಾನು ದಿವಸ ರಾಮನಗರಕ್ಕೆ ಬಂದು ಪ್ರಮಾಣ ಮಾಡಿ ಸತ್ಯವನ್ನು ನುಡಿಯುವುದೇನೆಂದರೆ,

1. ನಾನು ಈ ದಾವೆಯ ವಾದಿಯಾಗಿದ್ದು, ಸದರಿ ದಾವೆಯನ್ನು ನಾನು ಪ್ರತಿವಾದಿಗಳ ವಿರುದ್ಧ ದಾವಾ ಸ್ವತ್ತಿನ ಹಕ್ಕುಘೋಷಣೆ ಕೋರಿ ಸಲ್ಲಿಸಿರುತ್ತೇನೆ. ಈ ದಾವೆಯ ಎಲ್ಲಾ ವಿದ್ಯಮಾನಗಳನ್ನು ಬಲ್ಲವನಾಗಿರುತ್ತೇನೆ.

2. ನಾನು ಮುಂದುವರೆದು ಹೇಳುವುದೇನೆಂದರೆ, ಸದರಿ ದಾವಾ ಸ್ವತ್ತಿಗೆ ವಾದಿಯಾದ ನಾನು ಏಕ ಮಾತ್ರ ಮಾಲೀಕ ಹಕ್ಕುದಾರನಾಗಿರುತ್ತೇನೆ. ಸದರಿ ದಾವಾ ಸ್ವತ್ತು ರಾಮನಗರ ತಾಲ್ಲೂಕು, ಕಸಬಾ ಹೋಬಳಿ, ಸುಗ್ಗನಹಳ್ಳಿ ಗ್ರಾಮದ ಸರ್ವೆ ನಂ. 300 ರಲ್ಲಿ ಒಟ್ಟು 6 ಎಕರೆ ಜಮೀನು ಇದ್ದು, ಇದು ಮೂಲತಃ ನಮ್ಮ ತಂದೆಯವರಾದ ಲೇಟ್ ಚನ್ನಬಸವಯ್ಯನವರಿಗೆ ಸೇರಿದ ಆಸ್ತಿಯಾಗಿರುತ್ತದೆ.

Dist. NOTARY GOVT. D.SHIVARAM Advocate & Notary Public Ramanagara Dist. Reg. 10105 Expiry Date 24-09-2028

ನಾನು ಮುಂದುವರೆದು ಹೇಳುವುದೇನೆಂದರೆ, ನನ್ನ ತಂದೆಯವರ ಜೀವಿತ ಕಾಲದಲ್ಲಿ ನಮ್ಮ ತಂದೆ ಮತ್ತು ನಾವು ಅಣ್ಣ ತಮ್ಮಂದಿರುಗಳು ದಿನಾಂಕ: 21/01/1980 ರಂದು ನಮಗೆ ಸೇರಿದ ಎಲ್ಲಾ ಆಸ್ತಿಗಳನ್ನು ನೊಂದಾಯಿತ ವಿಭಾಗ ಪತ್ರದ ಮೂಲಕ ವಿಭಾಗ ಮಾಡಿಕೊಂಡಾಗ ದಾವಾ ಸ್ವತ್ತು ನನ್ನ ಭಾಗಕ್ಕೆ

ಬಂದಿರುತ್ತದೆ. ಅದರಲ್ಲಿ ಎ, ಬಿ, ಸಿ, ಡಿ, ಈ, ಎಫ್, ಷೆಡ್ಯೂಲುಗಳನ್ನಾಗಿ ವಿಂಗಡಿಸಿದ್ದು, "ಎ" ಷೆಡ್ಯೂಲ್ ಸ್ವತ್ತು ಸಿ. ಸದಾಶಿವಯ್ಯ ರವರಿಗೆ "ಬಿ" ಷೆಡ್ಯೂಲ್ ಸ್ವತ್ತು ಮರಿಚನ್ನಪ್ಪನವರಿಗೆ, ಸದಾಶಿವಯ್ಯನವರಿಗೂ, "ಸಿ" ಷೆಡ್ಯೂಲ್ ಸ್ವತ್ತು ನನಗೆ "ಡಿ" ಷೆಡ್ಯೂಲ್ ಸ್ವತ್ತು 1ನೇ ಪ್ರತಿವಾದಿಯಾದ ರೇಣುಕಾರಾಧ್ಯ ರವರಿಗೆ, "ಈ" ಷೆಡ್ಯೂಲ್ ಸ್ವತ್ತು ಸಿ. ಕುಮಾರಸ್ವಾಮಿ, "ಎಫ್" ಷೆಡ್ಯೂಲ್ ಸ್ವತ್ತು ಚನ್ನಬಸವಯ್ಯನವರಿಗೆ ಸೇರಿರುತ್ತದೆ. ನನ್ನ ತಂದೆಯಾದ ಶ್ರೀ ಚಂದ್ರಶೇಖರಯ್ಯ ರವರಿಗೆ ಸೇರಿದ್ದಾಗಿರುತ್ತದೆ.

4. ನಾನು ಮುಂದುವರೆದು ಹೇಳುವುದೇನೆಂದರೆ ವಿಭಾಗಾವಾದಾಗಿನಿಂದ ನಮ್ಮ ತಂದೆ ಮತ್ತು ನಾವುಗಳು ಅಣ್ಣ-ತಮ್ಮಂದಿರುಗಳು ಅವರವರುಗಳ ಹಿಸ್ಸೆಗೆ ಬಂದ ಸ್ವತ್ತುಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಅನುಭವಿಸಿಕೊಂಡು ಬರುತ್ತಿರುತ್ತೇವೆ. ಕಂದಾಯವನ್ನು ಸಹ ಪ್ರತ್ಯೇಕ ಪ್ರತ್ಯೇಕವಾಗಿ ಕಟ್ಟುತ್ತಿರುತ್ತೇವೆ. ವಿಭಾಗಾವಾದಂತೆ ಅವರವರುಗಳ ಹೆಸರಿಗೆ ಪ್ರತ್ಯೇಕವಾಗಿ ಪ್ರತ್ಯೇಕ ಖಾತೆ, ಪಹಣಿಗಳು ಆಗಿರುತ್ತದೆ.

5. ನಾನು ಮುಂದುವರೆದು ಹೇಳುವುದೇನೆಂದರೆ, ವಿಭಾಗವಾದ ನಂತರ ಸರ್ವೆ ನಂ. 300 ರಲ್ಲಿ ಅವರವರುಗಳಿಗೆ ವಿಭಾಗದಲ್ಲಿ ಬಂದಂತಹ ಸ್ವತ್ತುಗಳು ಅವರವರುಗಳ ಹೆಸರಿಗೆ ಪ್ರತ್ಯೇಕ ಪೋಡು ಮತ್ತು ದುರಸ್ತು ಆಗಿರುತ್ತದೆ. ಅದರಂತೆ ನನ್ನ ಹೆಸರಿಗೆ ಬಂದ ಹಿಸ್ಸೆಯು 300/8 ಎಂದು ಪೋಡಾಗಿರುತ್ತದೆ. ವಿಸ್ತೀರ್ಣ 12.1/2 ಗುಂಟೆ ಇರುತ್ತದೆ.

6. ನಾನು ಮುಂದುವರೆದು ಹೇಳುವುದೇನೆಂದರೆ, ಅದೇ ರೀತಿ ಪ್ರತಿವಾದಿಗೆ ಹಿಸ್ಸಾ ನಂ. 7 ಎಂದು ಪೋಡಾಗಿರುತ್ತದೆ. ಅವರವರ ಪೋಡಿನಲ್ಲಿ ಅವರವರೇ ಸ್ವಂತ ಸ್ವಾಧೀನಾನುಭವದಲ್ಲಿದ್ದು, ಅನುಭವಿಸಿಕೊಂಡು ಬರುತ್ತಿರುತ್ತಾರೆ. ಅದರಂತೆ ಖಾತೆ, ಪಹಣಿಯು ಸಹ ಅವರವರ ಹೆಸರಿಗೆ ಆಗಿರುತ್ತದೆ.

7. ನಾನು ಮುಂದುವರೆದು ಹೇಳುವುದೇನೆಂದರೆ,ವಸ್ತು ಸ್ಥಿತಿ ಹೀಗಿರಬೇಕಾದರೆ ಪ್ರತಿವಾದಿ 1 ರವರು ಉದ್ದೇಶ ಪೂರ್ವಕವಾಗಿಯೇ ವಾದಿಯ ದಾವಾ ಸ್ವತ್ತನ್ನು ಲಪಟಾಯಿಸಲು ಒಂದು ಸುಳ್ಳು ಅಪೀಲನ್ನು ಡಿ.ಡಿ. ಎಲ್.ಆರ್. ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ. ಅದರ ನಂ. ಡಿ.ಡಿ.ಎಲ್.ಆರ್. ಅಪೀಲು ನಂ. 62/2021-22 ಆಗಿರುತ್ತದೆ. ಅದಕ್ಕೆ ನಾನು ನನ್ನ ತಕರಾರನ್ನು ಸಲ್ಲಿಸಿರುತ್ತೇನೆ.

8. ನಾನು ಮುಂದುವರೆದು ಹೇಳುವುದೇನೆಂದರೆ,ಪ್ರತಿವಾದಿ 2 ಮತ್ತು 3 ರವರು ಪ್ರತಿವಾದಿ 1 ರವರ ಮಕ್ಕಳಾಗಿರುತ್ತಾರೆ. ಪ್ರತಿವಾದಿ 1 ರವರು ಈ ರೀತಿ

ಡಿ.ಡಿ.ಎಲ್.ಆರ್. ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿ ನನ್ನ ದಾವಾ ಸ್ವತ್ತಿನ ಸ್ವಾಧೀನಾನುಭವಕ್ಕೆ ಧಕ್ಕೆ ಉಂಟು ಮಾಡುತ್ತಿರುತ್ತಾರೆ. ಹಾಗೂ ನನ್ನ ವ್ಯವಸಾಯದ ಕೆಲಸ ಕಾರ್ಯಗಳಿಗೆ ಅಡಚಣೆ ಉಂಟು ಮಾಡುತ್ತಿರುತ್ತಾರೆ.

9. ನಾನು ಮುಂದುವರೆದು ಹೇಳುವುದೇನೆಂದರೆ, ದಾವಾ ಸ್ವತ್ತಿಗೂ ಹಾಗೂ ಪ್ರತಿವಾದಿಗಳಿಗೂ ಯಾವುದೇ ರೀತಿಯ ಸಂಬಂಧವಾಗಲೀ, ಹಕ್ಕುಭಾಧ್ಯತೆಗಳಾಗಲೀ ಇರುವುದಿಲ್ಲ. ಅವರು ಎಂದೂ ದಾವಾ ಸಹ ಆದರೂ ಸ್ವತ್ತಿನ ಸ್ವಾಧೀನಾನುಭವದಲ್ಲಿ ಕೂಡ ಇರುವುದಿಲ್ಲ. ಆದರೂ ಸಹ ಉದ್ದೇಶಪೂರ್ವಕವಾಗಿ ನನ್ನ ಜಮೀನನ್ನು ಲಪಟಾಯಿಸಲು ಇಲ್ಲ ಸಲ್ಲದ ಕಿರುಕುಳ ಕೊಡುತ್ತಿರುತ್ತಾರೆ. ಆದರೆ ಈ ರೀತಿ ಮಾಡಲು ಅವರಿಗೆ ಯಾವುದೇ ರೀತಿಯ ಹಕ್ಕುಬಾಧ್ಯತೆಗಳು ಇರುವುದಿಲ್ಲ. ಈ ಕಾರಣಕ್ಕಾಗಿ ನಾನು ಸದರಿ ದಾವೆಯನ್ನು ದಾವಾ ಸ್ವತ್ತಿನ ಹಕ್ಕುಘೋಷಣೆಗಾಗಿ ಸಲ್ಲಿಸಿರುತ್ತೇನೆ.

10. ಈ ಪ್ರಮಾಣ ಪತ್ರದೊಂದಿಗೆ ದಾವೆಗೆ ಸಂಬಂಧಪಟ್ಟ ದಾಖಲಾತಿಗಳನ್ನು ಮಾನ್ಯ ಘನ ನ್ಯಾಯಾಲಯಕ್ಕೆ ನಾನು ಹಾಜರುಪಡಿಸಿದ್ದು, ಸದರಿ ದಾಖಲಾತಿಗಳನ್ನು ನನ್ನ ಪರವಾಗಿ ನಿಶಾನಿಸಿಕೊಳ್ಳಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಆದ್ದರಿಂದ ವಾದಿಯಾದ ನಾನು ಘನ ನ್ಯಾಯಾಲಯದಲ್ಲಿ ಪ್ರಾರ್ಥಿಸಿ ಕೊಳ್ಳುವುದೇನೆಂದರೆ, ನಾನು ಸಲ್ಲಿಸಿರುವ ದಾವೆಯನ್ನು ಅಂಗೀಕರಿಸಿ ದಾವೆಯ ಪ್ರಾರ್ಥನೆಯಲ್ಲಿ ಕೋರಿರುವಂತೆ ಸದರಿ ದಾವೆಯನ್ನು ಡಿಕ್ರಿ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಈ ಮೇಲ್ಕಂಡ ಎಲ್ಲಾ ಅಂಶಗಳು ಸತ್ಯದಿಂದ ಕೂಡಿರುತ್ತವೆ ಎಂದು ಈ ಪ್ರಮಾಣ ಪತ್ರದ ಮೂಲಕ ದೃಢೀಕರಿಸುತ್ತಿದ್ದೇನೆ.

ಗುರ್ತಿಸುವವರು

ವಕೀಲರು

ಸ್ಥಳ: ರಾಮನಗರ

ದಿನಾಂಕ: ~~06/04/2026~~ 4/5/2026

ಪ್ರಮಾಣೀಕರಿಸುವವರು

ನನ್ನ ಸಮ್ಮುಖದಲ್ಲಿ ಪ್ರಮಾಣ

**SWORN TO BEFORE ME**

06/04/2026

D. SHIVARAM. M.A., LL.B
Advocate & Notary Public
Govt. of India
GVS Buliding, B.M. Road Ijoor,
Ramanagara Dist-562159

D. SHIVARAM, Advocate & Notary, Ramanagara Dist., Reg. 10105, Expiry Date 24-07-2027, NOTARY, GOVT. OF INDIA